**ಕರ್ನಾಟಕ ಸರ್ಕಾರ**

***ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.***

ಸಂಖ್ಯೆ: ಪಪೂಶಿಇ/ಶೈ.ಶಾ-05/ಹ.ಪ-ಹೆ.ಅ/(ಪರೀಕ್ಷೆ)2017-18 ದಿನಾಂಕ:22 -08-2017

## ಸುತ್ತೋಲೆ

**ವಿಷಯ:** ದ್ವಿತೀಯ ಪಿಯುಸಿ ಹಳೆಯ ಪಠ್ಯಕ್ರಮದಲ್ಲಿ ಅನುತ್ತೀರ್ಣರಾಗಿ ವಿದ್ಯಾರ್ಥಿಗಳು ಹಳೆಯ ಪಠ್ಯಕ್ರಮದಲ್ಲಿಯೇ ಪರೀಕ್ಷೆ ಬರೆಯಲು ಹೆಚ್ಚುವರಿ ಅವಕಾಶಗಳನ್ನು ನೀಡುವ ಬಗ್ಗೆ.

**ಉಲ್ಲೇಖ**
1. ಸರ್ಕಾರದ ಆದೇಶ ಸಂಖ್ಯೆ:ಇಡಿ 165 ಟಿಪಿಯು 2013. ದಿನಾಂಕ: 02.01.2014.
2. ಪಪೂಶಿಇ/ಶೈ.ಶಾ-05/ಹ.ಪ-ಹೆ.ಅ(ಪರೀಕ್ಷೆ)2013-14 ದಿನಾಂಕ: 10.01.2014.
3. ಪಪೂಶಿಇ/ಶೈ.ಶಾ-05/ಹ.ಪ-ಹೆ.ಅ(ಪರೀಕ್ಷೆ)2014-15ದಿನಾಂಕ: 14.01.2015.
4. ಪಪೂಶಿಇ/ಶೈ.ಶಾ-05/ಹ.ಪ-ಹೆ.ಅ(ಪರೀಕ್ಷೆ)2014-15 ದಿನಾಂಕ: 20.05.2017

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ ದ್ವಿತೀಯ ಪಿಯುಸಿ ವಿಜ್ಞಾನದ PCMB ವಿಷಯಗಳಲ್ಲಿ ಹಳೆಯ ಪಠ್ಯಕ್ರಮದಲ್ಲಿ ಪರೀಕ್ಷೆ ಬರೆಯಲು 2017ರ ವಾರ್ಷಿಕ ಪರೀಕ್ಷೆಯು ಕೊನೆಯ ಅವಕಾಶವಾಗಿತ್ತು. ಆದರೆ ವಿದ್ಯಾರ್ಥಿಗಳ ಬೇಡಿಕೆ ಮೇರೆಗೆ ಜುಲೈ 2017ರ ಪೂರಕ ಪರೀಕ್ಷೆಗೂ ಹಳೆಯ ಪಠ್ಯಕ್ರಮದಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡಲಾಗಿತ್ತು. ಇನ್ನು ಮುಂದೆ ದ್ವಿತೀಯ ಪಿಯುಸಿ PCMB ವಿಷಯಗಳನ್ನು **ಹೊಸ ಪಠ್ಯಕ್ರಮದಲ್ಲಿಯೇ** ಪರೀಕ್ಷೆ ಬರೆಯ ಬೇಕಾಗುತ್ತದೆ.

ಹಳೆಯ ಪಠ್ಯಕ್ರಮದ PCB ವಿಷಯಗಳಲ್ಲಿ ಪ್ರಾಯೋಗಿಕ ಪರೀಕ್ಷೆಗಳನ್ನು 10 ಅಂಕಗಳು ಹಾಗೂ ತಾತ್ವಿಕ ಪರೀಕ್ಷೆಗಳನ್ನು 90 ಅಂಕಗಳಿಗೆ ನಡೆಸಲಾಗಿತ್ತು. ಹಳೆಯ ಪಠ್ಯಕ್ರಮದ PCMB ವಿಷಯಗಳಲ್ಲಿ ಪರೀಕ್ಷೆ ಬರೆದು ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳು **ಹೊಸಪಠ್ಯಕ್ರಮದಲ್ಲಿ** ಪರೀಕ್ಷೆ ಬರೆಯಬೇಕಿದ್ದು, ಪ್ರಾಯೋಗಿಕ ಪರೀಕ್ಷೆಯನ್ನು ಪುನ: ಬರೆಯಲು ಅವಕಾಶವಿರುವುದಿಲ್ಲ. ಐಚ್ಛಿಕ ವಿಷಯಗಳಲ್ಲಿ ತಾತ್ವಿಕ ಪರೀಕ್ಷೆ ಬರೆದು ಇಲಾಖೆಯ ನಿಯಮದ ಪ್ರಕಾರ ಅಂಕಗಳನ್ನು ಪಡೆದು ಉತ್ತೀರ್ಣರಾಗಬೇಕಾಗುತ್ತದೆ. ಈಗಿನ ನಿಯಮದಂತೆ ಭೌತಶಾಸ್ತ್ರ, ರಸಾಯನಶಾಸ್ತ್ರ ಹಾಗೂ ಜೀವಶಾಸ್ತ್ರ ವಿಷಯಗಳಲ್ಲಿ 70 ಅಂಕಗಳಿಗೆ ಪರೀಕ್ಷೆ ನಡೆಸಲಾಗುತ್ತದೆ.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಇವರ ಏಕ ಕಡತ ಆದೇಶದ ದಿನಾಂಕ:09.08.2017ರಂತೆ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹಳೆಯ ಪಠ್ಯಕ್ರಮದಲ್ಲಿ PCB ವಿಷಯಗಳಲ್ಲಿ ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳ ಪ್ರಾಯೋಗಿಕ ಪರೀಕ್ಷೆಯ 10 ಅಂಕಗಳು ಹಾಗೂ ತಾತ್ವಿಕ ಪರೀಕ್ಷೆಯ 70 ಅಂಕಗಳು ಸೇರಿದಂತೆ

ಒಟ್ಟು 80 ಅಂಕಗಳಿಗೆ, ವಿದ್ಯಾರ್ಥಿ ಪರೀಕ್ಷೆಯಲ್ಲಿ ಪಡೆದುಕೊಂಡ ಅಂಕಗಳನ್ನು 100 ಅಂಕಗಳಿಗೆ ಪರಿವರ್ತಿಸಿ ವಿದ್ಯಾರ್ಥಿಗಳಿಗೆ ಫಲಿತಾಂಶ ನೀಡಲಾಗುವುದು.

ಅದೇರೀತಿ ದ್ವಿತೀಯ ಪಿಯುಸಿ ಪಿಸಿಎಂಬಿ ಹೊರತುಪಡಿಸಿ ಕಲಾ, ವಾಣಿಜ್ಯ, ಭಾಷೆ ಹಾಗೂ ಗೃಹವಿಜ್ಞಾನ, ಕಂಪ್ಯೂಟರ್ ಸೈನ್ಸ್, ಸಂಖ್ಯಾಶಾಸ್ತ್ರ, ಎಲೆಕ್ಟ್ರಾನಿಕ್ಸ್ ವಿಷಯಗಳಲ್ಲಿ ಹಳೆಯ ಪಠ್ಯಕ್ರಮದಲ್ಲಿ ಮಾರ್ಚ್ 2018ರ ವಾರ್ಷಿಕ ಪರೀಕ್ಷೆ ಬರೆದು ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ 2018ರ ಪೂರಕ ಪರೀಕ್ಷೆಗೂ ಹಳೆಯ ಪಠ್ಯಕ್ರಮದಲ್ಲಿಯೇ ಪರೀಕ್ಷೆ ಬರೆಯುವ ಅವಕಾಶವನ್ನು ನೀಡಿ ಆದೇಶಿಸಲಾಗಿದೆ.

**ಈ ಸೌಲಭ್ಯವನ್ನು ಯಾವುದೇ ಕಾರಣಕ್ಕೂ ವಿಸ್ತರಿಸಲಾಗುವುದಿಲ್ಲ** ಎಂಬ ಅಂಶವನ್ನು ಗಮನಕ್ಕೆ ತರಲಾಗಿದೆ.

2/8/17

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

**ಪ್ರತಿಗಳು:**

1. ಜಂಟಿ ನಿರ್ದೇಶಕರು,(ಶೈಕ್ಷಣಿಕ, ಮಾ&ಅನು, ಪರೀಕ್ಷೆ, ಆಡಳಿತ), ಪದವಿ ಪೂರ್ವ ಶಿಕ್ಷಣ ಇಲಾಖೆ-ಮಾಹಿತಿಗಾಗಿ.
2. ರಾಜ್ಯದ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರುಗಳ ಮುಖಾಂತರ ರಾಜ್ಯದ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳ ಗಮನಕ್ಕೆ ತರಲು-ಮುಂದಿನ ಕ್ರಮಕ್ಕಾಗಿ.
3. ನಿರ್ದೇಶಕರ ಆಪ್ತ ಶಾಖೆ.
4. ಶಾಖಾಧಿಕಾರಿಗಳು, ಇ-ಆಡಳಿತ –ಅಂತರಜಾಲದಲ್ಲಿ ಅಳವಡಿಸಲು.
5. ಕಛೇರಿ ಪ್ರತಿ.